## ಭಾಗ ಒಂದು

'ರೇವತಿ ಬಚ್ಚಲಲ್ಲಿ ಬಿದ್ದು ಅವಳನ್ನು ಆಸ್ಪತ್ರೆಗೆ ಸೇರಿಸಿದ್ದಾರೆ'– ಈ ಸುದ್ದಿ ಹೇಳಲು ನಾಗತ್ತೆಗೆ ಐದು ನಿಮಿಷ ಬೇಕಾಯಿತು. ರಾಮಚಂದ್ರ ಮಧ್ಯಾಹ್ನ ಶಿಫ್ಟ್ ಮುಗಿಸಿ ಎರಡು ಗಂಟೆಗೆ ಊಟಕ್ಕೆ ಬಂದಿದ್ದ. ಅವನು ಒಳಬರುವುದೇ ತಡ ತತತ ಪಪಪ ಎಂದು ಹೇಳಲು ಶುರುಮಾಡಿದವಳು ಬೊಚ್ಚು ಬಾಯಿ ಆಡಿಸುತ್ತ ಏನೇನೋ ಹೇಳಿ ಕೊನೆಯಲ್ಲಿ ಇಷ್ಟು ಮಜಕೂರು ತಿಳಿಸಿದಳು. ಮುಖವೆಲ್ಲ ಬೆವರಿನಿಂದ ತೊಪ್ಪೆಯಾಗಿತ್ತು, ಸೆರಗು ಅರ್ಧ ಜಾರಿ ಬೋಳಿಸಿದ ತಲೆ ಕಾಣುತ್ತಿತ್ತು. 'ನೀನು ಬರುವುದನ್ನೇ ಕಾಯುತ್ತಿದ್ದೆ ನೋಡು. ಮನೆಯಲ್ಲೇ ಇರು, ನಾನು ಆಸ್ಪತ್ರೆಗೆ ಹೋಗಿಬರುತ್ತೇನೆ... ಇಲ್ಲೇ ಪ್ರಭು ದವಾಖಾನೆಗೆ... ಸಾಧ್ಯವಾದರೆ ನಾಳೆ ಕೆಲಸಕ್ಕೆ ರಜೆ ಹಾಕುವಂತೆ ಸೀತಾರಾಮ ಹೇಳಿದ್ದಾನೇನೋ' ಎಂದು ಬಡಬಡಿಸಿ ಬಡಿಸಲು ಹೋದಳು. ಲೋಟ ಕೆಡವಿ ಸದ್ದು ಮಾಡುತ್ತ ಮುದುಕಿ ಗಡಿಬಿಡಿ ಮಾಡಿದಷ್ಟೂ ರಾಮಚಂದ್ರ ಸಾವಕಾಶ ಊಟ ಮಾಡಿದ. 'ಬಾಗಿಲು ಎಳೆದುಕೊ' ಎಂದು ಎರಡೆರಡು ಸಲ ಹೇಳಿ ಅವಳು ಆಸ್ಪತ್ರೆಗೆ ಹೋದಳು.

ಅವಳು ಹೋದದ್ದೇ, ಮನಸ್ಸಿನಲ್ಲಿ ಎದ್ದ ಭಾವನೆ ಖುಷಿಯೋ ಆತಂಕವೋ ತಿಳಿಯದೇ ರಾಮಚಂದ್ರ ಗೊಂದಲಿಸಿ ಕೂತಲ್ಲಿ ಕೂರಲಾರದೇ ನಿಂತಲ್ಲಿ ನಿಲ್ಲಲಾರದೇ ಮನೆಯೊಳಗೆಲ್ಲ ಓಡಾಡಿ ಸುಮ್ಮನೆ ಒಮ್ಮೆ ಕನ್ನಡಿಯಲ್ಲಿ ಇಣುಕಿ ನಂತರ ಸೀದಾ ರೇವತಿಯ ಕೋಣೆಗೆ ಹೋಗಿ ಅವಳ ಹಾಸಿಗೆಯ ಮೇಲೆ ಉರುಳಿಕೊಂಡ. ಎದೆ ಜೋರಾಗಿ ಹೊಡೆದುಕೊಳ್ಳುತ್ತಿತ್ತು. ರೇವತಿಯನ್ನ ಆಸ್ಪತ್ರೆಗೆ ಸೇರಿಸಿದ್ದಾರೆ ಅಂದ ತಕ್ಷಣವೇ ತನಗೇನೋ ಹೊಳೆಯಿತಲ್ಲವೇ ಅನ್ನಿಸಿ ಏನು ಅಂತ ತಿಳಯದೇ ತಳಮಳಿಸಿದ. ಕೆಲವು ವಾರಗಳ ಹಿಂದೆ ಒಂದು ಮಧ್ಯಾಹ್ನ ನಡೆದ ಈ ಘಟನೆ; ಅದಕ್ಕೂ ಮೊದಲು ನಾಗತ್ತೆಯೊಡನೆ ನಡೆದ ಜಗಳ; ಊರಿನಿಂದ ಪುರುಷೋತ್ತಮನ ಪತ್ರ... ಒಳಗೆ ಎಲ್ಲವೂ ಕಲಸುಮೇಲೋಗರವಾಗಿ ಒಂದಕ್ಕೊಂದು ತಾಳಮೇಳ ಹತ್ತದೆಯೇ ವಿನಾಕಾರಣ ನಾಗತ್ತೆಯ ಮೇಲೆ ಸಿಟ್ಟುಬಂತು. 'ಬೋಳಿ ಬೋಳಿ' ಎಂದು ಬೈದ ಮನಸ್ಸಿನಲ್ಲಿ. ಮುಂಬಯಿಗೆ ಬಂದು ಎಂಟು ವರ್ಷಗಳಾದರೂ ಒಂದು ಸ್ವಂತ ರೂಮು ಮಾಡಿಕೊಳ್ಳಲಾಗದ್ದಕ್ಕೇ ಈ ಮುದುಕಿ ಹೇಳಿದ ಎಲ್ಲವನ್ನೂ ಕೇಳಿಕೊಂಡಿರಬೇಕೆ? ಎಂದು ಒಮ್ಮೊಮ್ಮೆ ರಾತ್ರಿ ಮಲಗುವಾಗ ಅನ್ನಿಸಿದರೂ ಮರುದಿನ ಬೆಳಿಗ್ಗೆ ಮತ್ತೆ ಚಕ್ರ ತಿರುಗಲು ಸುರುವಾದೊಡನೆ ರಾತ್ರಿಯ ನಿರ್ಧಾರಗಳೆಲ್ಲ ಕನಸುಗಳಂತೆ ತೋರುತ್ತಿದ್ದವು. ತನ್ನ ಜೊತೆ ಕೆಲಸ ಮಾಡುವ ವಿದ್ಯಾಧರ 'ದೊಂಬಿವಿಲಿಯಲ್ಲಿ ಒಂದು ರೂಮಿದೆಯಂತೆ, ಇಪ್ಪತ್ತೂರು ಸಾವಿರ' ಅಂದರೆ 'ನನಗೆ ಗರಜಿದೆ ಮಾರಾಯ, ಆದರೆ ದುಡ್ಡೆಲ್ಲಿದೆ' ಅಂದುಬಿಡುತ್ತಿದ್ದ. ಬಾಡಿಗೆ ರೂಮು ಹಿಡಿಯುವಾ ಅಂದರೆ ಅಷ್ಟು ಸಂಬಳ ಬರಬೇಕಲ್ಲ. ಮುಂಬಯಿಗೆ ಬಂದ ಹೊಸತರಲ್ಲಿ ಎಂಟು ಜನರಿರುವ ಖೋಲಿಯಲ್ಲಿ ಮಂಚವೊಂದನ್ನು ಬಾಡಿಗೆಗೆ ಹಿಡಿದಿದ್ದ. ಸ್ವರತಿಯಂತಹ ವಿಷಯಗಳೂ ಸಾರ್ವಜನಿಕವಾಗುವ ಜಾಗ ಅದು. ಅಲ್ಲೇ ಇದ್ದರೆ ಬಿಚ್ಚಿಕೊಳ್ಳುತ್ತ ಬಿಚ್ಚಿಕೊಳ್ಳುತ್ತ ಒಂದು ದಿವಸ ತನ್ನೊಳಗಿನ ಶೂನ್ಯಕ್ಕೆ ಹೆದರಿ ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಅಂತನ್ನಿಸಿಬಿಟ್ಟಿತ್ತು. ಸುಮಾರು ಒಂದು ವರ್ಷದ ನಂತರ ನಾಗತ್ತೆಯ ಮನೆಗೆ ಬಂದದ್ದು.

ನಾಗತ್ತೆ ರಾಮಚಂದ್ರನ ಅಮ್ಮನ ಕಡೆಯ ಸಂಬಂಧ. ಅವಳ ಮಗ ಸೀತಾರಾಮ ಟಾಟಾದಲ್ಲಿ ಸೂಪರ್‌ವೈಸರ್. ಛಲೋ ದುಡ್ಡು ಮಾಡಿದ್ದಾನೆ. ಹೆಂಡತಿ ಕೂಡ ಕೆಲಸಕ್ಕೆ ಹೋಗುತ್ತಾಳೆ.